ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಪಾಳಿ

ವಿಷಯ: Annual Maintenance and Repairs of Electrical Installations to BBMP Buildings coming under Yelahanka Constituency

ಪುಟದ ಸಂಖ್ಯೆ: – 15 –

ಕಡತದ ಸಂಖ್ಯೆ: BTasmp/Golf-HO/EE/22/2023

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (01) ರಿಂದ (33) ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ 2022–23 ನೇ ಸಾಲಿನ ಪ್ರಸಕ್ತ ಆರ್ಥಿಕ ವರ್ಷದ ವಿದ್ಯುತ್ ವಿಭಾಗದ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ **"ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಆಡಳಿತ ಸ್ಥಾಯಿ ಸಮಿತಿ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:06.09.2022 ರ ನಡವಳಿಗಳು ವಿಷಯದ ಸಂಖ್ಯೆ:223/2022–23"** ರಂತೆ, ವಿದ್ಯುತ್ ಕಾಮಗಾರಿ ಕ್ರಿಯಾ ಯೋಜನೆ ಪಟ್ಟಿಗೆ ಅನುಮೋದನೆ ದೊರಕಿರುತ್ತದೆ.

ಈ ಹಿನ್ನಲೆಯಲ್ಲಿ 2022–23 ನೇ ಸಾಲಿನ ಯಲಹಂಕ ವಲಯದ ಕಾಮಗಾರಿ ಕ್ರಿಯಾ ಯೋಜನೆ ಪಟ್ಟಿಯ ಕ್ರಮ ಸಂಖ್ಯೆ 299 ಪಿ–ಕೋಡ್ ಸಂಖ್ಯೆ P0294- M & R to Electrical Installations in BBMP Buildings, Schools, M.Homes, Community Halls, Markets & Other ಅಡಿಯಲ್ಲಿ ಯಲಹಂಕ ವಲಯ ಯಲಹಂಕ ವಿಧಾನಸಬಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ 04 ಬರುವ ಪಾಲಿಕೆ ಕಟ್ಟಡಗಳಲ್ಲಿ ವಿದ್ಯುತ್ ಅಳವಡಿಕೆ ಮತ್ತು ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಕ್ರ ಸಂ	ವಾರ್ಡ್ ಸಂಖ್ಯೆ	ಕಾಮಗಾರಿ ಹೆಸರು	ಅಂದಾಜು ಮೊತ್ತ (ಲಕ್ಷಗಳಲ್ಲಿ)
1	4	Annual Maintenance and Repairs of Electrical Installations to BBMP buildings coming under Yelahanka Constituency.	6.00

ಈ ಮೇಲಿನ ಕಾಮಗಾರಿಯನ್ನು ನಿರ್ವಹಿಸಲು 2022–23 ನೇ ಸಾಲಿನ ವಿದ್ಯುತ್ ಕೆಪಿಡಬ್ಲ್ಯೂ ಎಸ್.ಆರ್ ದರಪಟ್ಟಿಯನ್ವಯ ಹಾಗೂ ಅನುಮೋದಿತ ದರಪಟ್ಟಿಗಳ ಅನ್ವಯ ರೂ.6.00 ಲಕ್ಷಗಳಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಹಾಗೂ ಅಂದಾಜು ಪಟ್ಟಿಯಲ್ಲಿ ಈ ಕೆಳಗಿನ ಮುಖ್ಯ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. Wiremen
2. Helper
3. LT UG Cable
4. LED downlight
5. Calling bell
6. Ceiling Fan
7. Switche and Regulators
8. 20/22 Watts LED Tube

ಈ ಮೇಲಿನ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆಯ ಸಂಖ್ಯೆ:ಬಿ12(1)/ಪಿಆರ್/394/2021–22, ದಿನಾಂಕ:27.07.2021 ರ ಅನ್ವಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಕೋರಿ ಮಂಡಿಸಿದೆ.

ಮುಖ್ಯ ಅಭಿಯಂತರರು
(ವಿದ್ಯುತ್) ಯಲಹಂಕ ಉಪ-ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್)

ಕಾರ್ಯಪಾಲಕ ಅಭಿಯಂತರರು
(ವಿದ್ಯುತ್) ಯಲಹಂಕ

ಪ್ರತಿಸೋ

ವಿಷಯ : Annual Maintenance and Repairs of Electrical Installations to BBMP Buildings coming under Yelahanka Constituency

ಪುಟದ ಸಂಖ್ಯೆ .....

ಕಡತದ ಸಂಖ್ಯೆ BBMP/ಆಯುಕ್ತ/42/22/22-23

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
38	ಈ ಮೇಲಿನ ಕಂಡಿಕೆಗಳ ಅನ್ವಯ ಮಾನ್ಯ ಮುಖ್ಯ ಅಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆಯ ಸಂಖ್ಯೆ: ಬಿ12(1)/ಪಿಆರ್/394/2021-22, ದಿನಾಂಕ:27.07.2021 ರ ಅನ್ವಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದೆ. ಕಾರ್ಯಪಾಲಕ ಅಭಿಯಂತರರು ಕ್ಷೇ.ಪಾ.ಅ(ವಿ) ಯಲಹಂಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
39	ಮಾನ್ಯ ಮುಖ್ಯ ಅಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆಯ ಸಂಖ್ಯೆ: ಬಿ12(1)/ಪಿಆರ್/394/2021-22, ದಿನಾಂಕ:27.07.2021 ರ ಅನ್ವಯ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ತೆಗೆದುಕೊಂಡಿರುವ ಮೇರೆಗೆ ಅಧಿಕಾರ ಪ್ರತ್ಯಾಯೋಜನೆಯನ್ವಯ ಅಂದಾಜು ಪಟ್ಟಿಯ ಕಡರು ಟೆಂಡರ್ ಪ್ರತಿಗೆ ಅನುಮೋದನೆಯನ್ನು ಕೋರಿ ಹಾಗೂ ಟೆಂಡರ್ ಕರೆಯಲು ಅನುಮೋದನೆಯನ್ನು ಕೋರಿ ಮಂಡಿಸಿದೆ. ಕಾರ್ಯಪಾಲಕ ಅಭಿಯಂತರರು ಕ್ಷೇ.ಪಾ.ಅ(ವಿ) (ವಿದ್ಯುತ್) ಯಲಹಂಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
40	ಅಧೀಕ್ಷಕ ಅಭಿಯಂತರರು (ವಿದ್ಯುತ್) ಸಂಖ್ಯೆ 836 ದಿನಾಂಕ 9/1/23 TA) ಸಂಖ್ಯೆ. ದಿನಾಂಕ 9/1/23 ಅಧೀಕ್ಷಕ ಅಭಿಯಂತರರು(ವಿದ್ಯುತ್) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Annual Maintenance & Repairs of Electrical Installations to BBMP Buildings coming under Yelahanka Constituency

ಪುಟದ ಸಂಖ್ಯೆ 17

ಕಡತದ ಸಂಖ್ಯೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಅಭಿಪ್ರಾಯಗಳು
	ಮಂಡಿಸಿದೆ:
41)	ಕಂಡಿಕೆ (34) ರಿಂದ (39) ರವರೆಗಿನ ವಿದ್ಯುತ್ ಯಲಹಂಕ ವಿಭಾಗದ ವರದಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.
42)	ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ಪಾಲಿಕೆಯ 2022-23ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ P0294- M & R to Electrical Installations in BBMP Buildings, Schools, M.Homes, Community Halls, Markets & Other ಅಡಿಯಲ್ಲಿ ರೂ. 6.00 ಲಕ್ಷ ಮೊತ್ತದ Annual Maintenance and Repairs of Electrical Installations to BBMP buildings coming under yelahanka Constituency ಕಾಮಗಾರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಮೆಮೋಗೆ ಸಹಿ ಮಾಡಿ, ತಾಂತ್ರಿಕ ಮಂಜೂರಾತಿ ನೀಡಿ, ಡಿ.ಟಿ.ಎಸ್ ಅನುಮೋದನೆ ಕೋರಿ ಸಲ್ಲಿಸಿರುತ್ತಾರೆ.
43)	ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ: 223/2022-23, ದಿನಾಂಕ:06/09/2022ರ ನಡವಳಿಗಳಲ್ಲಿ ವಿದ್ಯುತ್ ಇಲಾಖೆ ವಲಯವಾರು ಕ್ರಿಯಾಯೋಜನೆಗಳನ್ನು ಅನುಮೋದಿಸಿರುತ್ತಾರೆ. ಹಾಗೂ ಮಾನ್ಯ ಮುಖ್ಯ ಆಯುಕ್ತರವರ ಆದೇಶ ಸಂಖ್ಯೆ: ಮು.ಆ/ಪಿ.ಆರ್/93/2021-22, ದಿ: 06/07/2021 ರಲ್ಲಿ ಟೆಂಡರ್ ಪ್ರಕ್ರಿಯೆ ಪೂರೈಸಿ ಅರ್ಹ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಆದೇಶಿಸಲಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯನ್ನು ಯಾವುದೇ ಬೇರೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ನಿಯಮಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ರವರಿಗೆ ಸೂಚಿಸಬಹುದಾಗಿದ್ದು, ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಡಿ.ಟಿ.ಎಸ್ ಪ್ರತಿಗೆ ಅನುಮೋದನೆ ನೀಡಲು ಕೋರಿ ಮಂಡಿಸಿದೆ. ತಾಂ.ಸ. 12/1/23
44)	ಅಧೀಕ್ಷಕ ಅಭಿಯಂತರರು (ವಿದ್ಯುತ್)
	ಸದರಿ ಕಾಮಗಾರಿ ಅಂದಾಜುಪಟ್ಟಿಯಲ್ಲಿ ದೈನಂದಿನ ವೇತನದ ಆಧಾರದ ಮೇಲೆ ಸೇರಿಸಿಕೊಂಡಿರುವ ಕಾರ್ಮಿಕರ (ಎಲೆಕ್ಟ್ರಿಷಿಯನ್/ಹೆಲ್ಪರ್) ವೇತನ ಪಾವತಿಗೆ ಸಂಬಂಧಿಸಿದಂತೆ ಟೆಂಡರ್ ಅಧಿಸೂಚನೆಯಲ್ಲಿ ಅರ್ಹ ಗುತ್ತಿಗೆದಾರರು ಟೆಂಡರ್ ಕರಾರು ಮಾಡಿಕೊಂಡು ಕಾರ್ಯಾದೇಶ ಪಡೆಯುವ ಮುನ್ನ ಈ ಕಾಮಗಾರಿ ನಿರ್ವಹಣೆಗಾಗಿ ನಿಯೋಜಿಸಿಕೊಳ್ಳುವ ಕಾರ್ಮಿಕರ ವಿವರಗಳನ್ನು ಕಡ್ಡಾಯವಾಗಿ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಕಛೇರಿಗೆ ನೀಡುವಂತೆ ಹಾಗೂ ಸದರಿ ಕಾರ್ಮಿಕರಿಗೆ ಸಕಾಲದಲ್ಲಿ ವೇತನ ಪಾವತಿ ಮಾಡುವ ಷರತ್ತು ವಿಧಿಸಲು ಈ ಮೂಲಕ ಸೂಚಿಸಿದೆ. ಹಾಗೂ ಅರ್ಹ ಗುತ್ತಿಗೆದಾರರು ಈ ಷರತ್ತನ್ನು ಪೂರೈಸಿರುವ ಬಗ್ಗೆ ದೃಢೀಕರಿಸಿಕೊಂಡು ಕಾರ್ಯಾದೇಶ ನೀಡುವ ಷರತ್ತಿಗೊಳಪಡಿಸಿ ಡಿ.ಟಿ.ಎಸ್‌ಗೆ ಅನುಮೋದನೆ ನೀಡಿದೆ.

ಪುಟ ತಿರುಗಿಸಿ

ವಿಷಯ : Annual Maintenance and Repairs of Electrical Installations to BBMP Buildings coming under Yelahanka Constituency

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು
45)	ಕಾಮಗಾರಿ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವ ಸಮಯದಲ್ಲಿ ಕಾರ್ಮಿಕರಿಗೆ ವೇತನ ಪಾವತಿಸಿರುವ ಬಗ್ಗೆ ದಾಖಲೆಗಳನ್ನು ಲಗತ್ತಿಸಿದಲ್ಲಿ ಮಾತ್ರ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದು. 12/1/23 ಅಧೀಕ್ಷಕ ಅಭಿಯಂತರರು (ವಿದ್ಯುತ್)
46)	ಕಾ.ಇ(ವಿ)/ಯಲಹಂಕ
47)	**ಕಂಡಿಕೆ ಸಂಖ್ಯೆ (01) ರಿಂದ (45) ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.** ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಾಲಿಕೆಯ ಕಟ್ಟಡಗಳಲ್ಲಿ ವಿದ್ಯುತ್ ಉಪಕರಣಗಳನ್ನು ಅಳವಡಿಸಿ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿಗಾಗಿ ರೂ.6.00 ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಲು ಈ ಕಛೇರಿಯ ಟೆಂಡರ್ ನೋಟಿಫಿಕೇಷನ್ ಸಂಖ್ಯೆ: EE/ELE/YZ/TN/GN/02/2022-23, ದಿನಾಂಕ:24.01.2023 ರಂದು ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿದ್ದು, ವಿವರಗಳು ಈ ಕೆಳಕಂಡಂತಿದೆ.

1	ಟೆಂಡರ್‌ಗಿಟ್ಟ ಮೊತ್ತ	Rs.5,12,114.20
2	ಆಡಳಿತಾತ್ಮಕ ಅನುಮೋದನೆ ಸಂಖ್ಯೆ	BBMP/EE/ELE/YZ/AS/11/22-23,Dt:28.12.2022
3	ತಾಂತ್ರಿಕ ಮಂಜೂರಾತಿ ಸಂಖ್ಯೆ	BBMP/EE/ELE/ TS/07/22-23,Dt:28.12.2022.
4	ನಿಗಧಿ ಪಡಿಸಿದ ಇ.ಎಂ.ಡಿ. ಮೊತ್ತ	15000
5	ಟೆಂಡರ್‌ನ ಸ್ವರೂಪ	ಏಟ್ಟುವಾರು
6	ಟೆಂಡರ್ ನೋಟಿಫಿಕೇಷನ್ ಪ್ರಕಟವಾದ ದಿನಪತ್ರಿಕೆ	ಪ್ರಜಾವಾಣಿ, Dt:25.01.2022. Deccan Herald ದಿ:25.01.2022
7	ಟೆಂಡರ್ ಫಾರಂಗಾಗಿ ಮನವಿ ಸ್ವೀಕರಿಸಲು ನಿಗಧಿಪಡಿಸಿದ್ದ ಕೊನೆಯ ದಿನಾಂಕ:	02.02.2023
8	ಖಾಲಿ ಟೆಂಡರ್ ಫಾರಂ ದೊರೆಯುವ ದಿನಾಂಕ	25.01.2023 to 02-02-2023
9	ಭರ್ತಿ ಮಾಡಿದ ಟೆಂಡರ್ ಫಾರಂ ಸ್ವೀಕರಿಸಿದ ದಿನಾಂಕ	02.02.2023,
10	ಟೆಂಡರ್‌ನ್ನು ತೆರೆದ ದಿನಾಂಕ	03.02.2023, 5.00 pm
11	ಟೆಂಡರ್‌ಫಾರಂಗಳನ್ನು ಸ್ವೀಕರಿಸಿರುವವರ ಸಂಖ್ಯೆ	01 ಸಂಖ್ಯೆ
12	ಭಾಗವಹಿಸಿರುವವರ ಸಂಖ್ಯೆ	01 ಸಂಖ್ಯೆ
13	ಟೆಂಡರ್ ಸಿಂಧುತ್ವದ ಅವಧಿ	180 ದಿನಗಳು

48)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಪ್ಪಣಿ ಹಾಳೆ

ವಿಷಯ Annual Maintenance and Repairs of Electrical Installations to BBMP Buildings Coming Under Yelahanka Constituency

ಪುಟದ ಸಂಖ್ಯೆ – 19 –

ಕಡತದ ಸಂಖ್ಯೆ

ಕಂಡಿಕೆ ಸಂಖ್ಯೆ	ಟಪ್ಪಣಿಗಳು ಮತ್ತು ಆಜ್ಞೆಗಳು

49) ಮುಂದುವರೆದು, ಈ ಪ್ರಕಟಣೆಗೆ ಕೆಳಕಂಡ ಗುತ್ತಿಗೆದಾರರು ತಮ್ಮ ಟೆಂಡರ್ ಅನ್ನು ದಿನಾಂಕ:02-02-2023 ರಂದು 5.00 pm ಘಂಟೆಯೊಳಗೆ ಸಲ್ಲಿಸಿರುತ್ತಾರೆ. ಸದರಿ ಗುತ್ತಿಗೆದಾರರುಗಳಿಂದ ಸ್ವೀಕರಿಸಿದ ಟೆಂಡರ್‌ನ್ನು ದಿನಾಂಕ:0302.2023, 5.00 pm ರಂದು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಕಛೇರಿಯಲ್ಲಿ ತೆರೆಯಲಾಗಿರುತ್ತದೆ.

ಸದರಿ ಕಾಮಗಾರಿಗೆ ಗುತ್ತಿಗೆದಾರರು ನೀಡಿರುವ ಶೇಕಡಾವಾರು/ಐಟಂವಾರು ದರಗಳ ವಿವರಣೆಗಳು ಈ ಕೆಳಗಿನಂತಿರುತ್ತದೆ. ಹಾಗೂ ಅವರು ಸಲ್ಲಿಸಿರುವ ಇ.ಎಂ.ಡಿ ಮೊತ್ತ ಮೊದಲಾದವುಗಳನ್ನು ಅವರ ಹೆಸರುಗಳ ಮುಂದೆ ನಮೂದಿಸಲಾಗಿದೆ.

ಅನುಮೋದಿತ ಅಂದಾಜು ಪಟ್ಟಿಯಂತೆ ಟೆಂಡರ್‌ಗಿಟ್ಟ ಮೊತ್ತ (ರೂ ಗಳಲ್ಲಿ)				5,12,114.20
ಇ.ಎಂ.ಡಿ ಮೊತ್ತ ರೂ ಗಳಲ್ಲಿ				15000.00
ಜಿ.ಎಸ್.ಟಿ ಮೊತ್ತ ರೂ ಗಳಲ್ಲಿ				87,845.92
50) ಕ್ರ. ಸಂ	ಗುತ್ತಿಗೆದಾರರ ಹೆಸರು	ಟೆಂಡರ್‌ನಲ್ಲಿ ನಮೂದಿಸಿರುವ ದರ	ಶೇ.ವಾರು ದರ (ಹೆಚ್ಚು/ಕಡಿಮೆ)	ಷರಾ
01	Power Mac	Rs.465433.20	-9.11% Below	ಅತಿ ಕಡಿಮೆ ಆಕ್ಷೇಪಣೆಯಿರುವ (ಎಲ್-1) ಟೆಂಡರ್‌ದಾರರು

51) ಮೇಲಿನ ಕೋಷ್ಟಕದ ವಿವರದಂತೆ ಸದರಿ ಕಾಮಗರಿಯು ಪರಿಶಿಷ್ಟ ಪಂಗಡಕ್ಕೆ ಮೀಸಲಿಟ್ಟ ಕಾಮಗಾರಿಯಾಗಿದ್ದು, ಬಿಡ್‌ದಾರರಾದ **ಮೆ॥ ಪವರ್‌ಮ್ಯಾಕ್** ರವರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದು, ಸದರಿಯವರು ನೀಡಿರುವ ಟೆಂಡರ್ ಐಟಂವಾರು ದರಗಳನ್ನು ಅನುಮೋದಿತ ಅಂದಾಜುಪಟ್ಟಿಯ ದರಗಳಿಗೆ ಪರಿಶೀಲಿಸಿ ತಾಳೆ ಮಾಡಿ ನೋಡಿದಾಗ ಸದರಿ ಟೆಂಡರ್‌ನಲ್ಲಿ ಏಕೈಕ ಗುತ್ತಿಗೆದಾರರು ಭಾಗವಹಿಸಿದ್ದು, ಅವರ ದರ ನಮೂದಿಸಿರುತ್ತಾರೆ. ಹಾಗೂ ಟೆಂಡರ್ ದಸ್ತಾವೇಜಿನಲ್ಲಿರುವ ಷರತ್ತುಗಳಂತೆ ಎಲ್ಲಾ ತಾಂತ್ರಿಕ ಅರ್ಹತೆಗಳನ್ನು ಪೂರೈಸಿರುವ ಏಕೈಕ ಬಿಡ್‌ದಾರರಾಗಿರುತ್ತಾರೆ.

52) ಸದರಿ ನಿರ್ವಹಣಾ ಕಾಮಗಾರಿಯು ಅತ್ಯವಶ್ಯಕವಾಗಿರುವುದರಿಂದ **ಮೆ॥ ಪವರ್‌ಮ್ಯಾಕ್** ರವರು ನಮೂದಿಸಿರುವ ಮೊತ್ತ ರೂ. 4,65,433.20, ಶೇ.**-9.11%** ಕಡಿಮೆ ದರ ಸಲ್ಲಿಸಿರುವ ಏಕ ಬಿಡ್ ಟೆಂಡರ್ ಅನುಮೋದನೆಗೆ ಆನ್‌ಲೈನ್ ಮುಖಾಂತರ ಸಲ್ಲಿಸಿದ್ದು, ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪಾಲಿಕೆಯ ಕಟ್ಟಡಗಳಲ್ಲಿ ವಿದ್ಯುತ್ ಉಪಕರಣಗಳನ್ನು ಅಳವಡಿಸಿ ವಾರ್ಷಿಕ ನಿರ್ವಹಣೆ ಮಾಡುವ ಕಾಮಗಾರಿಯ ಅವಶ್ಯಕತೆ ಹಿನ್ನಲೆಯಲ್ಲಿ ಏಕ ಬಿಡ್ ಟೆಂಡರ್‌ನ್ನು ಅನುಮೋದಿಸಲು ಕೋರಿ ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರಿಗೆ ಕಡತವನ್ನು ಸಲ್ಲಿಸಿದೆ. 2022-23 ನೇ ಸಾಲಿನ ಪ್ರಸ್ತಾವನೆ ಚಾಲ್ತಿ ಬ್ಯುಡಾಯುವ ಹಣಕಾಸಿನ ಇರುವುದರಿಂದ ಮಾರ್ಚ್ 2023 ನೇ ತಿಂಗಳಿನ ಖರ್ಚಿನ ಬಾಬ್ತಿನ ಹಿಡಿತಕ್ಕಾಗಿ ಅನುಮೋದನೆ ಪಡೆಯಲು ಕೋರಿದೆ 20/3/2023 ಕ್ಕೆ ಮುಕ್ತಾಯಗೊಳ್ಳುವುದು.

ಕಾ.ಪಾ.ಅ(ವಿ)

7/2/23

53) ಅಧೀಕ್ಷಕ ಅಭಿಯಂತರರು (ವಿ)

ಸಂಖ್ಯೆ 836 9/2/23

7A) ಪರಿಶೀಲಿಸಿ. 9/2/23

ಅಧೀಕ್ಷಕ ಅಭಿಯಂತರರು (ವಿದ್ಯುತ್)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ : Annual Maintenance and Repairing of Electrical Installations to BEMP Building coming under Yelahanka Constituency

ಪುಟದ ಸಂಖ್ಯೆ (20)

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ:

54) ಮೂರ್ವ ವಂಕ್ತಿಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ರವರು ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.6.00 ಲಕ್ಷಗಳ ಟೆಂಡರ್‌ನ 1ನೇ ಕರೆಯಲ್ಲಿ(Indent No.56178) ಏಕೈಕ ಬಿಡ್‌ದಾರರು ಭಾಗವಹಿಸಿರುವುದಾಗಿ ಮತ್ತು ತಾಂತ್ರಿಕವಾಗಿ ಅರ್ಹವಾಗಿರುವ ಏಕೈಕ ಗುತ್ತಿಗೆದಾರರಾದ M/s Power Mac ರವರು ಟೆಂಡರ್‌ನಲ್ಲಿ ನಮೂದಿಸಿದ ಮೊತ್ತವಾದ ರೂ.4,65,433.20 **(Rupees Four lakh sixty five thousand four hundred thirty three and twenty paise only)** ಗಳನ್ನು ಟೆಂಡರ್‌ಗಿಟ್ಟ ಮೊತ್ತವಾದ ರೂ.5,12,114.20 ಗಳಿಗೆ ಹೋಲಿಸಿದಾಗ ಶೇ.-9.11% ರಷ್ಟು ಕಡಿಮೆ ಇರುವುದಾಗಿ ವರದಿ ಮಾಡಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ.

55) ಮಾನ್ಯ ಮುಖ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳ ಸಂಖ್ಯೆ:ಬಿ12(1)ಪಿ.ಆರ್/394/2021-22, ದಿನಾಂಕ:27/7/2021 ರ ಆದೇಶದಂತೆ ಅಧೀಕ್ಷಕ

56) ಅಭಿಯಂತರರು (ವಿದ್ಯುತ್) ಟೆಂಡರ್ ಅನುಮೋದಿಸುವ ಪ್ರಾಧಿಕಾರವಾಗಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ.

ಘನ ಸರ್ಕಾರದ ಆದೇಶ ಸಂಖ್ಯೆ: ಅಇ.576.ಮೆಚ್ಚಿ.12.2018, ದಿ:22/05/2018 ರಂತೆ ಅಸಾಧಾರಣ ಸಂದರ್ಭದಲ್ಲಿ ಮಾತ್ರ ಏಕೈಕ ಬಿಡ್‌ಅನ್ನು ಪರಿಗಣಿಸಬಹುದಾಗಿರುತ್ತದೆ. ಸದರಿ ಕಾಮಗಾರಿ ಟೆಂಡರ್‌ನಲ್ಲಿ ಏಕೈಕ ಬಿಡ್‌ದಾರರು ಭಾಗವಹಿಸಿದ್ದು, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ಕಂಡಿಕೆ (52)ರಲ್ಲಿ ಸದರಿ ಕಾಮಗಾರಿಯು ಕಳೆದ ಸಾಲಿನ ನಿರ್ವಹಣಾ

57) ಗುತ್ತಿಗೆ ಅವಧಿಯು ದಿ:31/3/2023ಕ್ಕೆ ಮುಕ್ತಾಯಗೊಳ್ಳಲಿದೆ ಎಂದು ವರದಿ ಮಾಡಿ ಮತ್ತು 2022-23 ನೇ ಸಾಲಿನ ಆರ್ಥಿಕ ವರ್ಷ ಮುಗಿಯುವ ಹಂತದಲ್ಲಿ ಇರುವುದರಿಂದ ಹಾಗೂ 2023ನೇ ಸಾಲಿನಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಿರುವುದರಿಂದ ಸದರಿ ಏಕೈಕ ಬಿಡ್ ಟೆಂಡರ್‌ಅನ್ನು ಅನುಮೋದಿಸಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಏಕೈಕ ಬಿಡ್‌ದಾರರಾದ M/s Power Mac ರವರು ನಮೂದಿಸಿರುವ ಮೊತ್ತವಾದ ರೂ.4,65,433.20 **(Rupees Four lakh sixty five thousand four hundred thirty three and twenty paise only)** ಗಳನ್ನು ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.-9.11% ರಷ್ಟು ಕಡಿಮೆ ದರಗಳನ್ನು ಅನುಮೋದಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ರವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ, ಬಿಡ್‌ದಾರರು ಅವಶ್ಯಕ ದಾಖಲಾತಿಗಳನ್ನು ಇ-ಪೋರ್ಟಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಅಪ್ಲೋಡ್

58) ಮಾಡಿರುವ ಹಾಗೂ ಪ್ರಸ್ತಾವನೆಯನ್ನು ಕೆ.ಟಿ.ಪಿ.ಪಿ ಕಾಯ್ದೆಗೆ ವ್ಯತಿರಿಕ್ತವಾದ/ಪ್ರತಿಕೂಲವಾದ ಯಾವುದೇ ಅಂಶಗಳು ಇಲ್ಲದೇ ಇರುವ ಕುರಿತು ಹಾಗೂ ಪ್ರಸ್ತಾಪಿತ ಕಾಮಗಾರಿ ಸಂಬಂಧ ಇ-ಪೋರ್ಟಲ್‌ನಲ್ಲಿ ಯಾವುದೇ ಮೇಲ್ಕನವಿ ಇಲ್ಲದೇ ಇರುವ ಬಗ್ಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ರವರು ಕಾರ್ಯಾದೇಶ ನೀಡುವ ಪೂರ್ವದಲ್ಲಿ ದೃಢಪಡಿಸಿಕೊಳ್ಳುವ ಪರತ್ತಿಗೊಳಪಡಿಸಿ, ಟೆಂಡರ್ ಅನುಮೋದಿಸುವ ಸಂಬಂಧ ಕಡತವನ್ನು ಅವಗಾಹನೆಗೆ ಮತ್ತು ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ತಾಂತ್ರಿಕ ಸಹಾಯಕರು
14/2/23

59) ಅಧೀಕ್ಷಕ ಅಭಿಯಂತರರು (ವಿದ್ಯುತ್)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Annual Maintenance and Repairs of Electrical Installations in BBMP Buildings coming under Yelahanka Constituency

ಪುಟದ ಸಂಖ್ಯೆ (21)

ಕಡತದ ಸಂಖ್ಯೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಪ್ರಸ್ತಾಪಿತ ಕಾಮಗಾರಿಯ ಟೆಂಡರ್ (Indent No.56178) ರಲ್ಲಿ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ.-9.11% ರಷ್ಟು ಕಡಿಮೆ ದರ ನಮೂದಿಸಿರುವ ಏಕೈಕ ಬಿಡ್‌ದಾರರಾದ M/s Power Mac ರವರು ನಮೂದಿಸಿರುವ ಮೊತ್ತವಾದ ರೂ.4,65,433.20 **(Rupees Four lakh sixty five thousand four hundred thirty three and twenty paise only)** ಗಳನ್ನು ಅನುಮೋದಿಸಲು ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ) ರವರು ಕಂಡಿಕೆ (52)ರಲ್ಲಿ ದೃಢೀಕರಿಸಿ ಶಿಫಾರಸ್ಸು ಮಾಡಿರುವ ಮೇರೆಗೆ, ಸದರಿ ಪ್ರಸ್ತಾವನೆಯಲ್ಲಿ ಕೆ.ಟಿ.ಪಿ.ಪಿ ಕಾಯ್ದೆಗೆವ್ಯತಿರಿಕ್ತವಾದ/ಪ್ರತಿಕೂಲವಾದ ಯಾವುದೇ ಅಂಶಗಳು ಇಲ್ಲದೇ ಇರುವ ಕುರಿತು ಹಾಗೂ ಪ್ರಸ್ತಾಪಿತ ಕಾಮಗಾರಿ ಸಂಬಂಧ ಇ-ಪೋರ್ಟಲ್‌ನಲ್ಲಿ ಯಾವುದೇ ಮೇಲ್ಮನವಿ ಇಲ್ಲದೇ ಇರುವ ಬಗ್ಗೆ ಮತ್ತೊಮ್ಮೆ ದೃಢಪಡಿಸಿಕೊಳ್ಳುವ ಪರತ್ತಿಗೊಳಪಡಿಸಿ, ಆರ್ಥಿಕ ಮೌಲ್ಯಮಾಪನವನ್ನು ಅನುಮೋದಿಸುತ್ತಾ, Online ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಲು ಕಡತ ರವಾನಿಸಿದೆ. 14/2/23 ಅಧೀಕ್ಷಕ ಅಭಿಯಂತರರು (ವಿದ್ಯುತ್) ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ಯಲಹಂಕ)
60)	

ವಿಷಯ : Annual Maintenance and Repairs of Electrical Installations to BBMP Buildings coming under Yelahanka Constituency

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಪೂರ್ವ ಪಂಕ್ತಿಗಳನ್ನು ತಮ್ಮ ಅವಗಾಹನೆಗೆ ತರುತ್ತಾ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2022–23 ನೇ ಸಾಲಿನ ಆಯವ್ಯಯದಲ್ಲಿ ವಿದ್ಯುತ್ ಇಲಾಖೆಗೆ ಮೀಸಲಿರಿಸಿರುವ ಅನುದಾನದಲ್ಲಿ ಮಾನ್ಯ ಆಡಳಿತಗಾರರ ವಿಷಯದ ಸಂಖ್ಯೆ 233/2022–23 ದಿನಾಂಕ 06/09/2022 ರ ನಡವಳಿಗಳಲ್ಲಿ ವಲಯವಾರು ಕ್ರಿಯಾಯೋಜನೆಗಳನ್ನು ಅನುಮೋದಿಸಿರುತ್ತಾರೆ. ಸದರಿ ಅನುಮೋದಿತ ಕ್ರಿಯಾಯೋಜನೆಯ ಲೆಕ್ಕಶೀರ್ಷಿಕೆ **ಪಿ–0294 (M & R to Electrical Installationa BBMP Buildings, Schools, M.Homes, Community Halls, Markets & Others)** ರಡಿಯಲ್ಲಿ ಅನುಮೋದನೆಯಾಗಿರುವ ಒಟ್ಟು **ರೂ.19.50** ಲಕ್ಷಗಳಿಗೆ ವಿವಿಧ ಕಾಮಗಾರಿಗಳಿಗೆ ಅನುಮೋದನೆಗೊಂಡಿರುತ್ತದೆ. ಈ ಕಾಮಗಾರಿಯು ಸದರಿ ಕ್ರಿಯಾಯೋಜನೆಯ ಅನುಮೋದಿತ ಕಾಮಗಾರಿಗಳಿಗೆ ಅಧೀಕ್ಷಕ ಅಭಿಯಂತರರು (ವಿದ್ಯುತ್) ರವರ ಅನುಮೋದನೆಯಂತೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ಮಾನ್ಯ ಮುಖ್ಯ ಆಯುಕ್ತರವರ ಆದೇಶ ಸಂಖ್ಯೆ ಮು.ಆ/ಪಿಆರ್/93/2021–22 ದಿನಾಂಕ 06/07/2021 ರಲ್ಲಿ ಟೆಂಡರ್ ಪ್ರಕ್ರಿಯೆ ಮೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶವನ್ನು ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯುವ ಆದೇಶವಿರುವ ಹಿನ್ನೆಲೆಯಲ್ಲಿ ಮಾನ್ಯ ವಲಯ ಆಯುಕ್ತರು ಯಲಹಂಕ ವಲಯ ರವರಿಂದ 2022–23 ನೇ ಸಾಲಿನ ಆಯವ್ಯಯದಲ್ಲಿ ಅನುಮೋದನೆಗೊಂಡಿರುವ ಕ್ರಿಯಾಯೋಜನೆಗಳಿಗೆ ಅನುದಾನವನ್ನು ಆಯಾ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಅದರಂತೆ Annual Maintenance and Repairs of Electrical Installations to BBMP buildings coming under Yelahanka Constituency. ಈ ಕಾಮಗಾರಿಗೆ ಕ್ರಿಯಾಯೋಜನೆಯನ್ವಯ **ವಾರ್ಡ್ ಸಂಖ್ಯೆ:04** ರಲ್ಲಿ ರೂ.6.00 ಲಕ್ಷಗಳಿಗೆ ಜಾಬ್‌ಕೋಡ್ ನೀಡಲು ಮುಖ್ಯ ಅಭಿಯಂತರರಿಗೆ ಕಡತವನ್ನು ಸಲ್ಲಿಸಲು ತಮ್ಮ ಆದೇಶವನ್ನು ಕೋರಿದೆ.

ಕಾರ್ಯಪಾಲಕಅಭಿಯಂತರರು(ವಿದ್ಯುತ್)
ಯಲಹಂಕ ವಲಯ 16/3/23
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು (ಯ.ವ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ: Annual Maintenance ಟಿಪ್ಪಣಿ ಕಡತ
Repairs of Electrical Installation ಪುಟದ ಸಂಖ್ಯೆ .....
to BBMP Buildings coming under
Yelahanka Constituency ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
64	ಅಧೀಕ್ಷಕ ಅಭಿಯಂತರರು, (ವಿದ್ಯುತ್) ರವರು ದಿನಾಂಕ:14.02.2023 ರಂದು ಅನುಮೋದನೆ ನೀಡಿದ್ದು, ಈ ಕಛೇರಿ ಪತ್ರದ ಸಂಖ್ಯೆ: ಬಿಬಿಎಂಪಿ/ಯ.ವ/ಕಾ.ಪಾ.ಅ(ವಿ)/ಓಆರ್/191/21-22, ದಿನಾಂಕ:23.02.2023 ರ ಮೂಲಕ 5% ಭದ್ರತಾ ಠೇವಣಿ ಮತ್ತು ವ್ಯತ್ಯಾಸದ ಮೊತ್ತ ಪಾವತಿಸಿ ಕರಾರು ಮಾಡಿಕೊಳ್ಳಲು ತಿಳಿಸಲಾಗಿತ್ತು. ಸದರಿ ಪತ್ರದಂತೆ ಗುತ್ತಿಗೆದಾರರಾದ **ಮೆ॥ ಪವರ್‌ಮ್ಯಾಕ್**ರವರು 5% ಭದ್ರತಾ ಠೇವಣಿ ಮೊತ್ತ **ರೂ.23,272/- ಗಳನ್ನು** ಕರ್ನಾಟಕ ಬ್ಯಾಂಕ್ **ಅಭ್ಯುಧಯ ಕ್ಯಾಪ್ ಸರ್ಟಿಫಿಕೇಟ್ ಸಂಖ್ಯೆ: 504926 ದಿನಾಂಕ:13.03.2023, ಹಾಗೂ ವ್ಯತ್ಯಾಸದ ಮೊತ್ತ ರೂ.46,681/- ಗಳನ್ನು** ಕರ್ನಾಟಕ ಬ್ಯಾಂಕ್ **ಅಭ್ಯುಧಯ ಕ್ಯಾಪ್ ಸರ್ಟಿಫಿಕೇಟ್ ಸಂಖ್ಯೆ: 504927 ದಿನಾಂಕ:13.03.2023,** ಶ್ರೀನಗರ ಶಾಖೆಯ ಮೂಲಕ ಪಾವತಿಸಿ ಕರಾರು ಒಪ್ಪಂದಕ್ಕೆ ದಿನಾಂಕ:24.03.2023 ರಂದು ಸಹಿ ಮಾಡಿರುತ್ತಾರೆ.
65	ಈ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತಾ ಗುತ್ತಿಗೆದಾರರಾದ **ಮೆ॥ ಪವರ್‌ಮ್ಯಾಕ್**ರವರಿಗೆ **"Annual Maintenance and Repairs of Electrical Installations to BBMP buildings coming under Yelahanka Constituency"** ರ ಕಾಮಗಾರಿಗೆ ಕಾರ್ಯಾದೇಶ ನೀಡಲು ಶುದ್ಧ ಪ್ರತಿಯನ್ನು ತಯಾರಿಸಿ ಕಾರ್ಯಾದೇಶದ ಪ್ರತಿಗೆ ಸಹಿಗಾಗಿ ಮಂಡಿಸಿದೆ.
66	ಕಾ.ಪಾ.ಅ(ವಿ) ಅಧೀಕ್ಷಕ ಅಭಿಯಂತರರು (ವಿದ್ಯುತ್) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ವಿಭಾಗ 24/3/23 ದಿನಾಂಕ: 24.3.2023